## ಅಧ್ಯಾಯ ೧

# ಪ್ರಾಸ್ತಾವಿಕ

ಮೈಸೂರು ನಗರವು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೇ ಕೀರ್ತಿತವಾಗಿದೆ. ೧೯೭೩ರಲ್ಲಿ ಕರ್ನಾಟಕ ರಾಜ್ಯವೆಂದು ಪುನರ್ ನಾಮಕರಣ ಆಗುವವರೆಗೆ ಈ ರಾಜ್ಯಕ್ಕೂ ಮೈಸೂರಿನ ಹೆಸರೇ ಇದ್ದದ್ದು ಅದರ ಮಹತ್ವವನ್ನು ಸೂಚಿಸುತ್ತದೆ. ಮೈಸೂರನ್ನು ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರಂತಹ ಅರಸರು ಸರ್. ಎಂ. ವಿಶ್ವೇಶ್ವರಯ್ಯನವರಂತಹ ಇಂಜಿನಿಯರ್ ಹಾಗೂ ದಿವಾನರುಗಳ ಸೇವೆಯು ಮೈಸೂರು ರಾಜ್ಯದ ವಿಶೇಷ ಅಭಿವೃದ್ಧಿಗೆ ಕಾರಣವಾಗಿದ್ದವು. ಇಡೀ ದೇಶದಲ್ಲಿಯೇ ಮೊದಲು ವಿದ್ಯುತ್ ಉತ್ಪಾದಿಸಿ, ಬಳಕೆಗೆ ತಂದ ರಾಜ್ಯವೆಂಬ ಹೆಗ್ಗಳಿಕೆ ಮೈಸೂರಿನದು. ಚಾಮುಂಡಿಬೆಟ್ಟ, ಮೈಸೂರು ಅರಮನೆ, ದಸರೆ ಜಂಬುಸವಾರಿ, ಬೃಂದಾವನ, ಮೃಗಾಲಯ, ರೇಷ್ಮೆಸೀರೆ, ಶ್ರೀಗಂಧದ ಕರಕುಶಲ ವಸ್ತುಗಳೇ ಮುಂತಾದವು ಮೈಸೂರನ್ನು ದೇಶ–ವಿದೇಶಗಳಲ್ಲಿ ಪ್ರಸಿದ್ಧಗೊಳಿಸಿವೆ.

೩೦ ಜಿಲ್ಲೆಗಳಲ್ಲಿ ಒಂದಾದ ಮೈಸೂರು, ಜಿಲ್ಲಾ ಹಾಗೂ ತಾಲೂಕು ಕೇಂದ್ರವೂ ಆಗಿದ್ದು, ೧೮೬೨ರಲ್ಲಿ ಮೈಸೂರು ಜಿಲ್ಲೆಯ ರಚನೆಯಾಯಿತು. ೧೮೬೯ರಲ್ಲಿ ಮೈಸೂರು ತಾಲೂಕಿನ ಉದಯವಾಯಿತು. ಈ ಜಿಲ್ಲೆಯು ೧೯೩೯ ಹಾಗೂ ೧೯೯೭ರಲ್ಲಿ ವಿಭಜಿಸಲ್ಪಟ್ಟರೂ ಈ ತಾಲೂಕು ಯಥಾರೀತಿ ಮೈಸೂರು ಜಿಲ್ಲೆಯಲ್ಲೇ ಮುಂದುವರಿದಿದೆ. ಆಡಳಿತಾತ್ಮಕವಾಗಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಮೈಸೂರು ತಾಲೂಕು ಒಂದಾಗಿದ್ದರೂ, ತನ್ನ ಪಾರಂಪರಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಉಳಿಸಿಕೊಂಡಿದೆ.

**ಹೆಸರಿನ ಹಿನ್ನೆಲೆ :** ಜಿಲ್ಲೆಯ ಹೆಸರನ್ನೇ ಈ ತಾಲೂಕು ಪಡೆದಿದ್ದು, ಅದರ ಹಿನ್ನೆಲೆ ವಿಶಿಷ್ಟವಾಗಿದೆ. ಪ್ರಾಚೀನ ಬೌದ್ಧ ಗ್ರಂಥದಲ್ಲಿ "ಮಹಿಷರಾಷ್ಟ್ರ" ಎಂಬ ಹೆಸರಿದ್ದು, ಅದು ಮೈಸೂರಿಗೆ ಸಂಬಂಧಿಸಿದ್ದೆಂಬ ಅಭಿಪ್ರಾಯವಿದ್ದು, ಅಶೋಕ ಚಕ್ರವರ್ತಿಯು ಬೌದ್ಧಭಿಕ್ಷುಗಳನ್ನು ಮತ ಪ್ರಚಾರಕ್ಕೆ ಈ ಪ್ರದೇಶಗಳಿಗೆ ಕಳುಹಿದ್ದನೆಂದು ಹೇಳಲಾಗುತ್ತದೆ. ತಮಿಳಿನ ಬಹು ಪ್ರಾಚೀನ ಗ್ರಂಥವೊಂದರಲ್ಲಿರುವ "ಇರುಮೈನಾಡೇ" ಮಹಿಷಮಂಡಲ ಎಂದು ಹೋಲಿಸುವುದುಂಟು. ಮಂಡ್ಯ ತಾಲೂಕಿನ ಕದಲೂರಿನ ೮೬೨ರ ತಾಮ್ರ ಶಾಸನದಲ್ಲಿ 'ಮೈಸೂರು' ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ಮುಂದೆ ೧೧ ಮತ್ತು

೧೨ನೇ ಶತಮಾನದ ಕೆಲವು ಶಾಸನಗಳಲ್ಲಿ "ಮೈಸುನಾಡು" ಎಂದಿರುವುದನ್ನು ಗುರುತಿಸಲಾಗಿದೆ. ಕೆಲವು ಸಾಹಿತ್ಯ ಕೃತಿಗಳಲ್ಲಿ "ಮಹಿಷೂರಪುರ' ಎಂದಿರುವುದೂ ಗಮನಿಸುವಂತಹದು. ಪೌರಾಣಿಕವಾಗಿ ಈಗಿನ ಚಾಮುಂಡಿಬೆಟ್ಟದಲ್ಲಿ ಹಿಂದೆ ಕೋಣನ ತಲೆಯುಳ್ಳ ಮಹಿಷನೆಂಬ ರಾಕ್ಷಸ ಇದ್ದನೆಂದೂ, ಅವನು ತಪಸ್ಸು ಮಾಡಿ ಬ್ರಹ್ಮನಿಂದ ವರವನ್ನು ಪಡೆದು ಅಜೇಯನಾಗಿ ದೇವತೆಗಳನ್ನೂ ಋಷಿಗಳನ್ನೂ ಪೀಡಿಸುತ್ತಿದ್ದನೆಂದೂ, ಆಗ ದೇವತೆಗಳೆಲ್ಲ ಸೇರಿ ಪರಮೇಶ್ವರನ ಆದೇಶದಂತೆ ತಮ್ಮೆಲ್ಲರ ಶಕ್ತಿಯನ್ನು ಚಾಮುಂಡಿಗೆ ಧಾರೆ ಎರೆದು ಕಳುಹಿಸಿದರೆಂದೂ, ಮಹಿಷಾಸುರನನ್ನು ಕೊಂದ ಚಾಮುಂಡಿ ಆ ಬೆಟ್ಟದಲ್ಲೇ ನೆಲಸಿದ್ದರಿಂದ ಅದಕ್ಕೆ ಚಾಮುಂಡಿಬೆಟ್ಟವೆಂದೂ, ಮಹಿಷಾಸುರನಿದ್ದ ಊರಿಗೆ ಮಹಿಷಪುರವೆಂದೂ ಹೆಸರಾಗಿ ಮುಂದೆ ಅದೇ ಮೈಸೂರಾಯಿತೆಂದು ಹೇಳಲಾಗುತ್ತದೆ.

**ಮೇರೆಗಳು :** ಮೈಸೂರು ತಾಲೂಕು ಪೂರ್ವಕ್ಕೆ ತಿರುಮಕೂಡಲು ನರಸೀಪುರ, ದಕ್ಷಿಣಕ್ಕೆ ನಂಜನಗೂಡು, ನೈರುತ್ಯಕ್ಕೆ ಹೆಗ್ಗಡದೇವನಕೋಟೆ, ಪಶ್ಚಿಮಕ್ಕೆ ಹುಣಸೂರು ಹಾಗೂ ಉತ್ತರಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕುಗಳಿಂದ ಸುತ್ತುವರಿದಿದೆ. ತಾಲೂಕಿನ ವಾಯವ್ಯ ದಿಕ್ಕಿನಲ್ಲಿ ಕೃಷ್ಣರಾಜನಗರ ತಾಲೂಕನ್ನು ಕಾವೇರಿ ನದಿಯ ಕೃಷ್ಣರಾಜಸಾಗರ ಬೇರ್ಪಡಿಸಿದೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ :** ಮೈಸೂರು ತಾಲೂಕು ೧೨°–೦೪′ ಮತ್ತು ೧೨°–೨೬′ ಉತ್ತರ ಅಕ್ಷಾಂಶ ಹಾಗೂ ೭೬°–೨೬′ ಮತ್ತು ೭೬°–೪೮′ ಪೂರ್ವ ರೇಖಾಂಶಗಳ ನಡುವೆ ಹರಡಿಕೊಂಡಿದೆ. ಈ ತಾಲೂಕು ಒಂದು ಮಹಾನಗರಪಾಲಿಕೆ, ನಾಲ್ಕು ಹೋಬಳಿ ಹಾಗೂ ೩೫ ಗ್ರಾಮಪಂಚಾಯ್ತಿಗಳನ್ನು ಹೊಂದಿದ್ದು, ತಾಲೂಕಿನಲ್ಲಿ ೧೩೧ ಜನವಸತಿ ಗ್ರಾಮ ಹಾಗೂ ೧೨ ನಿರ್ವಸತಿ ಗ್ರಾಮಗಳಿವೆ. ಮೈಸೂರು ತಾಲೂಕಿನ ಒಟ್ಟು ವಿಸ್ತೀರ್ಣವು ೮೨೮ ಚ.ಕಿ.ಮೀ. ಆಗಿದೆ. ಇದು ನೆರೆಯ ಹೆಗ್ಗಡದೇವನಕೋಟೆಯ ಒಟ್ಟು ವಿಸ್ತೀರ್ಣದ (೧೬೨೨ ಚ.ಕಿ.ಮೀ.) ಸುಮಾರು ಅರ್ಧದಷ್ಟಿದೆ. ಆದರೆ, ಜನಸಾಂದ್ರತೆಯು ಹೆಗ್ಗಡದೇವನಕೋಟೆ (೧೫೨) ಮತ್ತು ಪಿರಿಯಾಪಟ್ಟಣ (೨೮೫)ಗಳಿಗಿಂತ ಮೈಸೂರು ತಾಲೂಕಿನಲ್ಲಿಯೇ (೧೨೫೪) ಅತಿ ಹೆಚ್ಚಾಗಿದೆ. ಮೈಸೂರು ನಗರದಿಂದಾಗಿಯೇ ಈ ದಟ್ಟಣೆ.

೨೦೦೧ರ ಜನಗಣತಿ ಪ್ರಕಾರ ಮೈಸೂರು ತಾಲೂಕಿನಲ್ಲಿ ಗಣತಿಯಾದ ಒಟ್ಟು ಕುಟುಂಬಗಳು ೨,೧೭,೨೦೮ (ಗ್ರಾಮೀಣ ಭಾಗದಲ್ಲಿ ೪೮,೪೭೯ ಮತ್ತು ನಗರ ಪ್ರದೇಶದಲ್ಲಿ ೧,೬೮,೭೨೯). ತಾಲೂಕಿನಲ್ಲಿದ್ದ ಒಟ್ಟು ಜನಸಂಖ್ಯೆ ೧೦,೩೮,೪೯೦ ಆಗಿದ್ದು, ಇದರಲ್ಲಿ ಪುರುಷರು ೫,೨೯,೫೩೧ ಹಾಗೂ ಸ್ತ್ರೀಯರು ೫,೦೮,೯೫೯ರಷ್ಟಿದ್ದರು. ಜಿಲ್ಲೆಯ ಗ್ರಾಮೀಣ ಪ್ರದೇಶಕ್ಕಿಂತ (೨,೩೯,೨೬೨) ನಗರಪ್ರದೇಶಗಳಲ್ಲಿ ವಾಸಿಸುತ್ತಿದ್ದವರ ಸಂಖ್ಯೆ (೭,೯೯,೨೨೮) ಹೆಚ್ಚಾಗಿದ್ದಿತು. ಹಾಗೆಯೇ, ಗ್ರಾಮೀಣ ಭಾಗದಲ್ಲಿ ಪುರುಷರ ಸಂಖ್ಯೆ ೧,೨೩,೧೬೮ರಷ್ಟು ಇದ್ದರೆ, ಸ್ತ್ರೀಯರ ಸಂಖ್ಯೆ ಅದಕ್ಕಿಂತ ಕಮ್ಮಿಯಾಗಿದ್ದಿತು (೧,೧೬,೦೯೪). ನಗರಪ್ರದೇಶದಲ್ಲಿಯೂ ಸ್ತ್ರೀಯರಿಗಿಂತ (೩,೯೨,೮೬೫) ಪುರುಷರ ಸಂಖ್ಯೆ (೪,೦೬,೩೬೩) ಹೆಚ್ಚಾಗಿಯೇ ದಾಖಲಾಗಿದೆ. ಮೈಸೂರು ತಾಲೂಕು ಜಿಲ್ಲೆಯ

ಇತರ ತಾಲೂಕುಗಳಿಗಿಂತ ಸಹಜವಾಗಿಯೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದ್ದು, ಮೊದಲ ಸ್ಥಾನದಲ್ಲಿದೆ. ಯಾವುದೇ ಪ್ರದೇಶದಲ್ಲಿ ವಾಸಿಸುತ್ತಿರುವ ಜನಸಂಖ್ಯೆಯಲ್ಲಿ ೧,೦೦೦ ಪುರುಷರಿಗೆ ಅನುಪಾತವಾಗಿ ಕಾಣಬರುವ ಸ್ತ್ರೀಯರ ಸಂಖ್ಯೆಯನ್ನು ಜನಗಣತಿ ಪರಿಭಾಷೆಯಲ್ಲಿ ಲಿಂಗಾನುಪಾತ ಎಂದು ಗುರುತಿಸಲಾಗುತ್ತದೆ. ಲಿಂಗಾನುಪಾತವು ಪುರುಷ–ಸ್ತ್ರೀಯರ ಹುಟ್ಟು ಸಾವಿನಲ್ಲಿ ಆಗುತ್ತಿರುವ ಪ್ರವೃತ್ತಿಯ ಸೂಚಕವೂ ಆಗಿರುತ್ತದೆ. ಮೈಸೂರು ತಾಲೂಕಿನ ಲಿಂಗಾನುಪಾತವು ೯೬೧ ಆಗಿದ್ದು, ಇದು ಜಿಲ್ಲೆಯ ಇತರ ತಾಲೂಕುಗಳ ಅನುಕ್ರಮಣಿಕೆಯಲ್ಲಿ ಆರನೇ ಸ್ಥಾನದಲ್ಲಿ ನಿಲ್ಲುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಅಂಕಿ–ಅಂಶಗಳನ್ನು ಹೋಲಿಸಿದಾಗ ಮೈಸೂರು ತಾಲೂಕಿನಲ್ಲಿ ನಗರ ಪ್ರದೇಶಕ್ಕಿಂತ (೯೬೭) ಗ್ರಾಮೀಣ ಪ್ರದೇಶದಲ್ಲಿನ ಅನುಪಾತವು (೯೪೩) ಬಹಳ ಕಡಿಮೆ ಇರುವುದು ದಾಖಲಾಗಿದೆ.

ತಾಲೂಕಿನಲ್ಲಿನ ೦–೬ ವಯೋಗುಂಪಿನ (ಅಂದರೆ ೬ ವರ್ಷಗಳಿಗಿಂತ ಕಡಿಮೆ ವಯಸ್ಸಿನ) ಮಕ್ಕಳ ಒಟ್ಟು ಸಂಖ್ಯೆ ೧,೨೦,೮೨೧ ಆಗಿದೆ (ಗಂಡುಮಕ್ಕಳು ೬೧,೮೮೯, ಹೆಣ್ಣುಮಕ್ಕಳ ಸಂಖ್ಯೆ ೫೮,೯೩೨). ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿದ್ದ ಗಂಡುಮಕ್ಕಳ ಸಂಖ್ಯೆ ೧೬,೪೯೭ ಹೆಣ್ಣು ಮಕ್ಕಳ ಸಂಖ್ಯೆ ೧೫,೭೨೨ ಆಗಿದ್ದರೆ, ನಗರ ಪ್ರದೇಶದಲ್ಲಿದ್ದ ಗಂಡುಮಕ್ಕಳ ಸಂಖ್ಯೆ ೪೫,೩೯೨, ಹೆಣ್ಣುಮಕ್ಕಳ ಸಂಖ್ಯೆ ೪೩,೨೧೦ ಆಗಿದೆ. ಈ ವಯೋಗುಂಪಿನ ಮಕ್ಕಳ ಲಿಂಗಾನುಪಾತವನ್ನು ಗಮನಿಸಿದರೆ ತಾಲೂಕಿನ ನಗರಪ್ರದೇಶದ ಒಟ್ಟಿನ ಪ್ರಮಾಣಕ್ಕೆ (೯೫೨) ಜಿಲ್ಲಾ ಪ್ರಮಾಣವು (೯೫೨) ಸಮನಾಗಿರುವುದು ಗಮನ ಸೆಳೆಯುತ್ತದೆ. ಗ್ರಾಮೀಣ ಪ್ರದೇಶದ ಪ್ರಮಾಣವು (೯೫೩) ಈ ಎರಡೂ ಪ್ರಮಾಣಗಳಿಗಿಂತ ಸ್ವಲ್ಪ ಹೆಚ್ಚಾಗಿದೆ.

ತಾಲೂಕಿನಲ್ಲಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೧,೩೨,೬೦೭ ಆಗಿದ್ದು (ಗ್ರಾಮೀಣ ೪೨,೬೪೦ ಹಾಗೂ ನಗರ ೮೯,೯೬೭) ಇವರಲ್ಲಿ ೬೭,೭೯೯ ಪುರುಷರು (ಗ್ರಾಮೀಣ ೨೧,೬೯೦ ಹಾಗೂ ನಗರ ೪೬,೧೦೯) ಮತ್ತು ೬೪,೮೦೮ ಸ್ತ್ರೀಯರು (ಗ್ರಾಮೀಣ ೨೦,೯೫೦ ಹಾಗೂ ನಗರ ೪೩,೮೫೮) ಇದ್ದರು. ಅಂದರೆ, ಗ್ರಾಮೀಣ ಭಾಗಕ್ಕಿಂತ ನಗರಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರ ಸಂಖ್ಯೆ ಸುಮಾರು ಎರಡರಷ್ಟು ಹೆಚ್ಚಿನ ಪ್ರಮಾಣದಲ್ಲಿದೆ.

ಆದರೆ, ತಾಲೂಕಿನಲ್ಲಿನ ಪರಿಶಿಷ್ಟ ಪಂಗಡದ ಜನಸಂಖ್ಯೆಯು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಬಹುಮಟ್ಟಿಗೆ ಸಮಾನವಾಗಿ ಹಂಚಿಕೆಯಾಗಿರುವುದು ವೇದ್ಯವಾಗುತ್ತದೆ (ಗ್ರಾಮೀಣ ಪ್ರದೇಶದಲ್ಲಿನ ಒಟ್ಟು ಸಂಖ್ಯೆ ೩೨,೩೩೧ ಮತ್ತು ನಗರ ಪ್ರದೇಶದಲ್ಲಿನ ಸಂಖ್ಯೆ ೩೦,೪೩೧). ಇವರಲ್ಲಿ ಗ್ರಾಮೀಣ ಭಾಗದಲ್ಲಿದ್ದ ಪುರುಷರ ಸಂಖ್ಯೆ ೧೬,೫೫೮ ಆದರೆ ನಗರಪ್ರದೇಶದಲ್ಲಿದ್ದ ಪುರುಷರ ಸಂಖ್ಯೆ ೧೫,೪೪೫ ಹಾಗೂ ಗ್ರಾಮೀಣ ಭಾಗದಲ್ಲಿದ್ದ ಸ್ತ್ರೀಯರ ಸಂಖ್ಯೆ ೧೫,೭೭೩ ಆಗಿದ್ದರೆ, ನಗರ ಪ್ರದೇಶದಲ್ಲಿದ್ದ ಸ್ತ್ರೀಯರ ಸಂಖ್ಯೆ ೧೪,೯೮೬ ಆಗಿದ್ದಿತು.

ತಾಲೂಕಿನ ಒಟ್ಟು ಸಾಕ್ಷರತಾ ಪ್ರಮಾಣವು ಶೇ.೭೬.೪೯ ಇದ್ದು, ತಾಲೂಕಿನಲ್ಲಿ ಒಟ್ಟು ಅಕ್ಷರಸ್ಥ ಪುರುಷರ ಪ್ರಮಾಣ ಶೇ.೮೧.೫೮ ಆದರೆ, ಅಕ್ಷರಸ್ಥ ಸ್ತ್ರೀಯರ ಪ್ರಮಾಣ ಶೇ.೭೧.೨೦ ಆಗಿದ್ದಿತು. ಗ್ರಾಮೀಣ ಮತ್ತು ನಗರಗಳಿಗೆ ಹೋಲಿಸಿದಾಗ, ನಗರಪ್ರದೇಶದವರಲ್ಲಿನ ಒಟ್ಟು ಸಾಕ್ಷರತಾ ಪ್ರಮಾಣ ಶೇ.೮೪.೩೮ ಆಗಿದ್ದರೆ, ಗ್ರಾಮಾಂತರದ ಪ್ರಮಾಣವು ಶೇ.೪೯.೩೮ ಮಾತ್ರವಿತ್ತು. ಗ್ರಾಮೀಣ ಪ್ರದೇಶದ ಮಹಿಳೆಯರಿಗಿಂತಲೂ (ಶೇ.೪೦.೨೪) ನಗರ ಪ್ರದೇಶದಲ್ಲಿನ ಮಹಿಳೆಯರ ಸಾಕ್ಷರತಾ ಪ್ರಮಾಣ ವಿಶೇಷವಾಗಿ ಹೆಚ್ಚಾಗಿರುವುದೂ (ಶೇ.೮೦.೦೮) ಗಮನಾರ್ಹವಾಗಿದೆ.

**ಭೂಸ್ವರೂಪ :** ಪೂರ್ಣ ಮಲೆನಾಡು ಅಥವಾ ಬಯಲು ಪ್ರದೇಶವಲ್ಲದ ಈ ತಾಲೂಕು ಮೂಲತಃ ಇಳಿಜಾರಿನ ಬಯಲ ಮೇಲ್ಮೈನಿಂದ ಕೂಡಿದೆ. ತಾಲೂಕಿನಲ್ಲಿ ಹೆಚ್ಚು ಬೆಟ್ಟಗಳಿಲ್ಲ; ಬೆಟ್ಟಹಳ್ಳಿ ಭಾಗದಲ್ಲಿ ಗುಡ್ಡಗಳು ಹೆಚ್ಚಾಗಿವೆ. ಮೈಸೂರು ನಗರದ ಆಗ್ನೇಯ ದಿಕ್ಕಿನಲ್ಲಿ ೧,೦೬೩ ಮೀ ಎತ್ತರವಿರುವ ಚಾಮುಂಡಿ ಬೆಟ್ಟ ಮುಖ್ಯವಾಗಿದ್ದು ಸನಿಹ ವರಕೋಡಿನ ಬಳಿಯಲ್ಲೂ ಬೆಟ್ಟವಿದೆ. ತಾಲೂಕಿನ ಭೂಪ್ರದೇಶ ಕೆಂಪು ಮಿಶ್ರಿತ ಕಪ್ಪು, ಬಿಳಿ ಮಣ್ಣಿನಿಂದ ಕೂಡಿದ್ದು, ಹೆಚ್ಚಿನ ಫಲವತ್ತತೆಯನ್ನು ಪಡೆದಿದೆ. ತಾಲೂಕಿನ ವಾಯುಗುಣ ಸಾಮಾನ್ಯವಾಗಿ ಹಿತಕರವಾಗಿರುತ್ತದೆ. ಏಪ್ರಿಲ್‌ನಿಂದ ಜೂನ್ ತಿಂಗಳವರೆಗೆ ಉಷ್ಣಾಂಶ ೩೨° ಸೆ. ನಷ್ಟು ಗರಿಷ್ಠ ಮಟ್ಟವನ್ನು ಮುಟ್ಟುತ್ತದೆ.

**ನದಿ ಮತ್ತು ಜಲವ್ಯವಸ್ಥೆ :** ತಾಲೂಕಿನ ವಾಯವ್ಯ ಭಾಗದಲ್ಲಿ ಕೃಷ್ಣರಾಜಸಾಗರ (ಮಂಡ್ಯ ಜಿಲ್ಲೆ)ವಿದ್ದು, ತಾಲೂಕಿನ ಒಳಭಾಗಕ್ಕೆ ಅದರ ಹಿನ್ನೀರಿನ ಪ್ರದೇಶ ಬಿಟ್ಟರೆ ಯಾವುದೇ ನದಿಯು ತಾಲೂಕಿಗೆ ಸೇರಿದಂತೆ ಹರಿಯುವುದಿಲ್ಲ. ತಾಲೂಕಿನ ಉತ್ತರಕ್ಕೆ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಕಾವೇರಿ ನದಿಯು ಪೂರ್ವಾಭಿಮುಖವಾಗಿ ಹರಿಯುತ್ತದೆ. ಹಾಗೆಯೇ ದಕ್ಷಿಣದಲ್ಲಿ ನಂಜನಗೂಡು ತಾಲೂಕಿನಲ್ಲಿ ಕಪಿಲಾ ನದಿ ಹರಿದು ಮುಂದೆ ತಿರುಮಕೂಡಲು ನರಸೀಪುರದಲ್ಲಿ ಇವೆರಡೂ ಸಂಗಮಿಸುತ್ತವೆ. ತಾಲೂಕಿನಲ್ಲಿ ಒಟ್ಟು ೧೪,೨೮೫ ಹೆ. ನೀರಾವರಿ ಪ್ರದೇಶವಿದ್ದು, ಇದರಲ್ಲಿ ೧೦,೧೭೦ ಹೆ. ಕಾಲುವೆಗಳಿಂದ ೨,೪೦೦ ಹೆ. ಕೆರೆಗಳಿಂದ ೩೦೦ ಹೆ. ಬಾವಿಗಳಿಂದ, ೧,೪೦೦ ಹೆ. ಕೊಳವೆ ಬಾವಿಗಳಿಂದ ಮತ್ತು ೧೫. ಹೆ. ಏತ ನೀರಾವರಿಯಿಂದ ಜಲಪೂರೈಕೆಗೊಳಪಟ್ಟಿವೆ (೨೦೦೮). ಮೈಸೂರು ನಗರದಲ್ಲಿ ಕುಕ್ಕರಹಳ್ಳಿ ಕೆರೆ, ಕಾರಂಜಿಕೆರೆ, ಲಿಂಗಾಂಬುಧಿ ಕೆರೆಗಳಿದ್ದು, ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ಕೆರೆ, ಕೊಳ, ಬಾವಿಗಳು ಸಾಮಾನ್ಯವಾಗಿ ಕಂಡುಬರುತ್ತವೆ.

**ಅಂತರ್ಜಲ:** ಜಿಲ್ಲೆಯ ಇತರೆಡೆಗಳಂತೆ ಈ ತಾಲೂಕಿನಲ್ಲೂ ಅಂತರ್ಜಲವು ಸಮೃದ್ಧವಾಗಿದೆ. ಹಿಂದೆ ಅಂತರ್ಜಲವನ್ನು ಬಾವಿ ತೋಡುವುದರ ಮೂಲಕ ಸದುಪಯೋಗಪಡಿಸಿಕೊಳ್ಳಲಾಗುತ್ತಿತ್ತು. ಆದರೆ ಕೊಳವೆಬಾವಿಗಳ ಅವಿಷ್ಕಾರದಿಂದಾಗಿ ಅಂತರ್ಜಲವನ್ನು ವರ್ಷದುದ್ದಕ್ಕೂ ಬಳಸಿಕೊಳ್ಳುವಂತಾಗಿದೆ. ತಾಲೂಕಿನಲ್ಲಿ ಪಂಪ್‌ಸೆಟ್– ಕೊಳವೆಬಾವಿಗಳ ಸಂಖ್ಯೆ ದಶಕದಿಂದ ದಶಕಕ್ಕೆ ವೃದ್ಧಿಸುತ್ತಾ ಬಂದಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೮೦೫೬೩ ಪಂಪ್‌ಸೆಟ್‌ಗಳಿದ್ದವು.

ತಾಲೂಕಿನ ಭೂಪ್ರದೇಶವು ಸಮುದ್ರಮಟ್ಟದಿಂದ ಸರಾಸರಿ ೮೫೦ ಮೀಟರ್ ಎತ್ತರದಲ್ಲಿದ್ದು, ಮೇಲ್ಭಾಗವು ಒರಟಾದ ಕ್ರಿಸ್ಟಲೈನ್ ಶಿಲೆಗಳಿಂದ ಕೂಡಿದ್ದು, ಜಲವನ್ನು ಸುದೀರ್ಘ ಕಾಲ ಹಿಡಿದಿಡುವ ಸಾಮರ್ಥ್ಯವನ್ನು ಹೊಂದಿದೆ. ಇದರ ಮೇಲ್ಪದರದಲ್ಲಿ ಕಂಡು ಬರುವ ಪೋರಸ್ ಕಣಯುಕ್ತ ಸಡಿಲ ಮಣ್ಣಿನ ಸ್ತರಗಳ ಪ್ರತೀ ಕ್ಯೂಬಿಕ್ ಅಡಿ ಮಣ್ಣು ಸುಮಾರು ಮೂರು ಗ್ಯಾಲನ್ ನೀರನ್ನು ಹೀರಿಡುವಷ್ಟು ಸಾಮರ್ಥ್ಯವನ್ನು ಹೊಂದಿರುತ್ತದೆ. ಅಕ್ಟೋಬರ್ ಅಂತ್ಯದವರೆಗೆ ಅಂತರ್ಜಲಮಟ್ಟವು ಮೇಲ್ಪದರಕ್ಕೆ ಸನಿಹದಲ್ಲಿರುತ್ತದೆ. ಆದರೆ ಕ್ರಮೇಣ ಅಂತರ್ಜಲ ಮಟ್ಟವು ಇಳಿಮುಖವಾಗುತ್ತಾ ಸಾಗಿ ಮಾರ್ಚ್–ಏಪ್ರಿಲ್ ವೇಳೆಗೆ ತೀರಾ ಕೆಳಕ್ಕಿಳಿಯುತ್ತದೆಂದು ತಿಳಿದುಬರುತ್ತದೆ. ೨೦೦೪ರಲ್ಲಿ ಅಂದಾಜಿಸಿದ್ದಂತೆ ತಾಲೂಕಿನಲ್ಲಿ ಲಭ್ಯವಿದ್ದ ೬೭೨೦ ಹೆ.ಮೀ. ಅಂತರ್ಜಲದಲ್ಲಿ ೫೯೪೦ ಹೆ.ಮೀ. ಅಂತರ್ಜಲ ಬಳಕೆಯಾಗಿತ್ತು. ೨೦೦೯ರ ಅಂತ್ಯಕ್ಕೆ ಇನ್ನೂ ೭೮೦ ಹೆ.ಮೀ. ಅಂತರ್ಜಲ ಲಭ್ಯವಿದ್ದು, ಅದನ್ನು ಬಳಸಿಕೊಳ್ಳಬೇಕಾಗಿತ್ತು.

**ತಾಲೂಕಿನ ಭೂಶಿಲಾ ಲಕ್ಷಣ :** ತಾಲೂಕು ಪ್ರದೇಶವು ಸುಮಾರು ೨೮೦–೩೦೦ ಲಕ್ಷ ವರ್ಷಗಳ ಹಿಂದೆ ಪ್ರಿಕ್ಯಾಂಬಿಯನ್ ಯುಗದಲ್ಲಿ ರೂಪುಗೊಂಡ ಪ್ರಾಚೀನ ಶಿಲಾರಚನೆಗಳಿಂದ ರಚಿಸಲ್ಪಟ್ಟಿರುವ ಅಂಶವನ್ನು ಭೂಗರ್ಭಶಾಸ್ತ್ರಜ್ಞರು ಈಗಾಗಲೇ ಬೆಳಕಿಗೆ ತಂದಿದ್ದಾರೆ. ಪರ್ಯಾಯದ್ವೀಪ (ಪೆನಿನ್ಸುಲಾರ್) ನೀಸ್ ಶಿಲಾಶ್ರೇಣಿ ಎಂದೂ ಕರೆಯಲ್ಪಟ್ಟಿರುವ ಇದು ಉತ್ತಮ ದರ್ಜೆಯ ಸಿಸ್ಟ್ ಶಿಲಾಪದರಗಳನ್ನು ಹೊಂದಿದೆ. ಡಯಟೆಕ್ಟಟಿಕ್ ಹಾಗೂ ಮೆಟಟೆಕ್ಟಿಟಿಕ್ ಮಾದರಿಗಳಿಂದ ಕೂಡಿದ ಮಿಗ್ಮಟೈಟ್ಸ್ ಶಿಲಾಪದರಗಳ ನಡುವೆ ಅಲ್ಲಲ್ಲಿ ಎಂಪಿಬೂಲೈಟ್ ಶಿಲಾಪದರವೂ ಕಂಡು ಬರುತ್ತದೆ. ಇದನ್ನು ಸರಗೂರು ಶಿಲಾಸಮೂಹ ಎಂದೂ ಕರೆಯಲಾಗುತ್ತದೆ. ಈ ಶಿಲಾಶ್ರೇಣಿಯ ಸುತ್ತಮುತ್ತ ಇರುವ ನೀಸ್ ಶಿಲಾಪದರವು ಅಷ್ಟೇ ಪುರಾತನ ಕಾಲದ್ದೆಂದು ತಿಳಿದು ಬರುತ್ತದೆ. ಅಲ್ಲದೆ ಸರಗೂರು ಸಿಸ್ಟ್, ಕಯೊನೈಟ್, ಸಿಲಿಮನೈಟ್, ಗ್ರಾಫೈಟ್ ಹಾಗೂ ಇತರ ಖನಿಜಗಳನ್ನು ಹೊಂದಿದೆ. ಮೈಸೂರು ಜಿಲ್ಲೆಯ ಬಹುಭಾಗವು ಮಿಗ್ಮಟೈಟ್ಸ್ ಶಿಲಾಪದರಗಳಿಂದ ಕೂಡಿದ್ದು, ಈ ತಾಲೂಕಿನಲ್ಲೂ ಅದೇ ಶಿಲಾಪದರ ಅಧಿಕ ಪ್ರಮಾಣದಲ್ಲಿದೆ.

**ಭೂ ಕಂಪನಮುಕ್ತ ವಲಯ :** ಪ್ರಾಕೃತಿಕ ವಿಕೋಪಗಳಲ್ಲಿ ಒಂದಾದ ಭೂಕಂಪವು ಮಾನವನನ್ನು ಅನಾದಿಕಾಲದಿಂದ ಕಾಡುತ್ತಿದೆ. ಪ್ರಿಕ್ಯಾಂಬಿಯನ್ ಯುಗದಲ್ಲಿ ರೂಪುಗೊಂಡಿರುವ ದಕ್ಷಿಣಪೀಠ ಭೂಮಿಯಲ್ಲಿ ಈ ತಾಲೂಕು ಪ್ರದೇಶವು ಇರುವುದರಿಂದ ಭೂಕಂಪನ ಸಾಧ್ಯತೆ ತೀರಾ ವಿರಳವೆಂದೇ ಈ ವರೆಗೆ ಭಾವಿಸಲಾಗಿತ್ತು. ಆದರೆ ೧೮೪೩ರಲ್ಲಿ ಜರುಗಿದ ಬಳ್ಳಾರಿ ಭೂಕಂಪ, ೧೯೦೦ರಲ್ಲಿ ಘಟಿಸಿದ ಕೊಯಮತ್ತೂರು ಭೂಕಂಪ, ಮಂಡ್ಯದ ೧೯೭೨ರ ಲಘು ಭೂಕಂಪ, ಧಾರವಾಡದ ೧೯೮೪ರ ಭೂಕಂಪ, ೧೯೯೩ರ ಲಾತೂರು ಭೂಕಂಪ, ೧೯೯೬ರ ಧಾರವಾಡ ಭೂಕಂಪ, ಮುಂತಾದವುಗಳ ತೀವ್ರತೆಯ ಅನುಭವ ರಾಜ್ಯದ ವಿವಿಧೆಡೆಗಳಂತೆ, ಈ ತಾಲೂಕಿನಲ್ಲೂ ಉಂಟಾಯಿತೆಂದು ತಿಳಿದುಬರುತ್ತದೆ. ಬ್ಯೂರೊ ಆಫ್ ಇಂಡಿಯಾ ಸ್ಟ್ಯಾಂಡರ್ಡ್(ಬಿಐಎಸ್)ನವರು ರೂಪಿಸಿರುವ ಭಾರತೀಯ ಭೂಕಂಪನ ವಲಯ ನಕಾಶೆಯಲ್ಲಿ ಕರ್ನಾಟಕ ರಾಜ್ಯವನ್ನು

ಒಂದು, ಎರಡು ಹಾಗೂ ಮೂರನೆಯ ವಲಯದಲ್ಲಿ ಗುರುತಿಸಲಾಗಿದ್ದು, ಇದನ್ನು ಸುಧಾರಿತ ಮೆಕಾಲ್ಲಿ ಪ್ರಮಾಣದನ್ವಯ ಗರಿಷ್ಟ ತೀವ್ರತೆಯಿರುವ V, VI, VII ಪ್ರವರ್ಗದೊಂದಿಗೆ ಸಮೀಕರಿಸಲಾಗಿದೆ.

**ಅರಣ್ಯ ಸಂಪತ್ತು :** ಅರಣ್ಯ ಸಂಪತ್ತಿನಲ್ಲಿ ಜಿಲ್ಲೆಯು ರಾಜ್ಯದಲ್ಲಿ ಎರಡನೆಯ ಸ್ಥಾನದಲ್ಲಿದ್ದರೂ ಈ ತಾಲೂಕು ಬಹುಪಾಲು ಬಯಲು ಪ್ರದೇಶದಿಂದ ಕೂಡಿದ್ದು, ಬೆಟ್ಟಗುಡ್ಡಗಳು ವಿರಳವಾಗಿರುವುದರಿಂದ ಅರಣ್ಯವೂ ಕಡಿಮೆ ಪ್ರಮಾಣದಲ್ಲಿದೆ. ಅದೂ ಕುರುಚಲು ಕಾಡಾಗಿದ್ದು, ದಟ್ಟವಾದ ಅರಣ್ಯಪ್ರದೇಶ ಇಲ್ಲವೆಂದೇ ಹೇಳಬಹುದು. ಆದರೂ ತಾಲೂಕಿನ ಒಂದೆರಡು ಶಾಸನಗಳಲ್ಲಿ ಅಡವಿಯ ಉಲ್ಲೇಖವಿರುವುದು ಉಲ್ಲೇಖಾರ್ಹ. ಅರಣ್ಯಗಳು ಆಯಾ ಗ್ರಾಮಗಳ ಆಸ್ತಿ ಎಂದು ೧೮೩೫ರವರೆಗೆ ಭಾವಿಸಲಾಗಿತ್ತು. ಸ್ಥಳೀಯರ ರಕ್ಷಣೆಗೊಳಪಟ್ಟಿದ್ದ ಅವುಗಳಿಗೆ ಆಗ ಹೆಚ್ಚು ಹಾನಿಯಾಗುತ್ತಿರಲಿಲ್ಲ. ಮುಂದೆ ೧೮೬೪ರಲ್ಲಿ ಅರಣ್ಯ ಇಲಾಖೆಯು ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಮರ ಕಡಿಯುವಿಕೆಯ ಮೇಲೆ ನಿಯಂತ್ರಣ ವಿಧಿಸಲಾಯಿತು. ಆದರೆ ೧೮೭೯ರಲ್ಲಿ ಅರಣ್ಯ ಇಲಾಖೆಯನ್ನು ರದ್ದುಗೊಳಿಸಿ, ಅರಣ್ಯಗಳ ಸಂರಕ್ಷಣಾ ಹೊಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಯಿತು. ತತ್ಪರಿಣಾಮವಾಗಿ ಅರಣ್ಯ ಸಂರಕ್ಷಣೆಯು ಗೊಂದಲಕ್ಕೀಡಾದುದರಿಂದ, ೧೮೮೫ರಲ್ಲಿ ಅರಣ್ಯ ಇಲಾಖೆಯನ್ನು ಪ್ರತ್ಯೇಕಪಡಿಸಿ ಪುನರ್ ರಚಿಸಲಾಯಿತು. ತೇಗದ ಮರದ ಪ್ಲಾಂಟೇಷನ್‌ಗೆ ವಿಶೇಷ ಗಮನ ನೀಡಲಾಯಿತು. ಅಲ್ಲಿಂದೀಚೆಗೆ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿ ಅರಣ್ಯೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.

ತಾಲೂಕಿನಲ್ಲಿ ದಟ್ಟ ಅರಣ್ಯ ಪ್ರದೇಶವಿಲ್ಲದಿದ್ದರೂ, ಹೆಚ್ಚಾಗಿ ಮಾನ್ಸೂನ್ ಮಾದರಿಯ ಎಲೆ ಉದುರುವ ಅರಣ್ಯದಿಂದ ಕೂಡಿದೆ. ಸಣ್ಣಪುಟ್ಟ ಗಿಡಮರ, ಪೊದೆಗಳಿವೆ. ಅಲ್ಲಲ್ಲಿ ನೀಲಗಿರಿ ತೋಪುಗಳಿವೆ. ತಾಲೂಕಿನ ನೈರುತ್ಯ ಭಾಗದಲ್ಲಿ ಈಚಲು ಮರಗಳಿಂದ ಕೂಡಿದ ಕುರುಚಲು ಕಾಡುಗಳಿವೆ. ಕೆಲವೆಡೆ ಮಾವು, ನೇರಳೆ, ತೆಂಗಿನ ತೋಪುಗಳಿವೆ. ತಾಲೂಕಿನಲ್ಲಿ ಒಟ್ಟು ೩,೨೧೬ ಹೆ. ಅರಣ್ಯ ಪ್ರದೇಶವನ್ನು ಗುರುತಿಸಲಾಗಿದೆ (೨೦೦೮–೦೯). ವಿರಳವಾಗಿ ಮರಗಳ ಮಧ್ಯೆ ಗಂಧದ ಮರಗಳೂ ಬೆಳೆಯುತ್ತವೆ. ಜನರಿಗೆ ಉದ್ಯೋಗ ಕಲ್ಪಿಸುವಷ್ಟು ಅರಣ್ಯ ವಸ್ತುಗಳ ಉತ್ಪತ್ತಿ ತಾಲೂಕಿನಲ್ಲಿಲ್ಲದಿದ್ದರೂ ಕೆಲವೆಡೆ ಜೇನು, ಬಿದಿರು, ಮಾವು, ಹುಣಸೆ, ತೆಂಗು ಮುಂತಾದ ಮರಗಳ ಫಲಗಳು ಜನರಿಗೆ ತಾತ್ಕಾಲಿಕ ಉದ್ಯೋಗ ದೊರಕಿಸಿ ಕೊಡುತ್ತವೆ.

ಉರುವಲು ಕಟ್ಟಿಗೆಯನ್ನು ಸಾರ್ವಜನಿಕರಿಗೆ ಒದಗಿಸಲು ಸರ್ಕಾರಿ ಸ್ವಾಮ್ಯದ ಸೌದೆ ಡಿಪೋಗಳು ಜಿಲ್ಲೆಯಲ್ಲಿ ಇವೆಯಾದರೂ, ತಾಲೂಕಿನಲ್ಲಿ ಇದು ಖಾಸಗಿ ವಲಯದಲ್ಲೇ ನಡೆದಿದೆ. ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನೊಂದಿಗೆ ಐದು ವರ್ಷದ ಸಾಮಾಜಿಕ ಅರಣ್ಯ ಯೋಜನೆಯ ಮೂಲಕ ರಾಜ್ಯದಾದ್ಯಂತ ಅರಣ್ಯೀಕರಣ ಕಾರ್ಯಕ್ರಮವನ್ನು ೧೯೮೩–೮೪ರ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದರಂತೆ, ಬಂಜರು, ಗೋಮಾಳ, ರಸ್ತೆ ಬದಿ, ಕೆರೆ ಕಾಲುವೆ, ಅಣೆ ದಂಡೆ, ಶಾಲಾ ಆವರಣ, ಮುಂತಾದೆಡೆ

ಸಸ್ಯ ನೆಡುವ ಯೋಜನೆಯನ್ನು ಗ್ರಾಮಪಂಚಾಯಿತಿ ಹಾಗೂ ಸಾರ್ವಜನಿಕರ ನೆರವಿನೊಂದಿಗೆ ಆರಂಭಿಸಲಾಯಿತು. ಈ ಯೋಜನೆಯನ್ನು ತ್ವರಿತಗೊಳಿಸಲು ಕೈಗಾರಿಕೆಗಳಿಗೆ ಸಸಿಗಳನ್ನು ಉಚಿತವಾಗಿ ನೀಡಲಾಯಿತು. ಹೆದ್ದಾರಿಯ ಇಕ್ಕೆಲದಲ್ಲಿ ನೆರಳಿಗಾಗಿ ಸಾಲುಮರಗಳನ್ನು ಬೆಳೆಸುವ ಯೋಜನೆಯನ್ನೂ ಕೈಗೊಳ್ಳಲಾಯಿತು. ಅಲ್ಲದೇ ೧೯೮೪–೮೫ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದ ಭೂರಹಿತ ಕುಟುಂಬಗಳನ್ನು ತಾಲೂಕಿಗೆ ಮೂರರಂತೆ ಗುರುತಿಸಿ, ಪ್ರತೀಕುಟುಂಬದ ಅಧೀನಕ್ಕೆ ಎರಡು ಹೆಕ್ಟೇರು ಬಂಜರು ಭೂಮಿಯಲ್ಲಿ ಸಸಿ ನೆಟ್ಟು ಏಳು ವರ್ಷ ಕಾಲ ಪೋಷಿಸುವ ಹೊಣೆಯನ್ನು ನೀಡಲಾಯಿತು. ಅದಕ್ಕಾಗಿ ಆ ಕುಟುಂಬಗಳಿಗೆ ೨೫೦/– ರೂ.ಗಳ ಮಾಸಿಕ ಗೌರವಧನವನ್ನೂ ನೀಡಲಾಯಿತು. ವನಮಹೋತ್ಸವ ಕಾರ್ಯಕ್ರಮವನ್ನು ೧೯೮೫ರಲ್ಲಿ ಹಮ್ಮಿಕೊಳ್ಳುವ ಮೂಲಕ, ಸಸಿವೃದ್ಧಿ ಕೇಂದ್ರ (ನರ್ಸರಿ)ಗಳನ್ನು ರಾಜ್ಯದಾದ್ಯಂತ ಆರಂಭಿಸಲಾಯಿತು. ಸಾರ್ವಜನಿಕರಿಗೆ ಉಚಿತವಾಗಿ ಸಸಿಗಳನ್ನು ವಿತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಗ್ರಾಮೀಣ ಭೂಹೀನ ಕಾರ್ಮಿಕರಿಗೆ ನಿಶ್ಚಿತ ದುಡಿಮೆ ನೀಡುವ ಯೋಜನೆಯನ್ನು ಅರಣ್ಯೀಕರಣಕ್ಕಾಗಿ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಯಿತು. ತಾಲೂಕಿನಲ್ಲೂ ಅರಣ್ಯಾಭಿವೃದ್ಧಿ ಕ್ರಿಯೆಯು ನಿರಂತರವಾಗಿ ನಡೆದಿದೆ. ಮೈಸೂರು ನಗರದ ಸುತ್ತ ಹಿಂದೆ ಇದ್ದ ಮಾವು, ತೆಂಗಿನ ತೋಟಗಳು ನಗರೀಕರಣದಿಂದಾಗಿ ಕಣ್ಮರೆಯಾಗಿವೆ.

**ಸಸ್ಯಸಂಪತ್ತು :** ತಾಲೂಕಿನಲ್ಲಿ ವೈವಿಧ್ಯಮಯ ಗಿಡ–ಮರಗಳಿದ್ದು ನಂದಿ, ಮತ್ತಿ, ನೀಲಗಿರಿ, ತಾಳೆ, ಹಲಸು, ಮಾವು, ಬೇವು, ಹುಣಸೆ, ಅತ್ತಿ, ಆಲ, ಅರಳಿ, ಗೊಬ್ಬಲಿ ಮುಂತಾದ ಮರಗಳು ಸಮೃದ್ಧವಾಗಿವೆ. ಬೊಂಬು–ಬಿದಿರು, ಬೆತ್ತ, ಮುಂತಾದವು ಅಲ್ಲಲ್ಲಿ ಕಂಡು ಬರುತ್ತಿದ್ದು, ನಾನಾ ಬಗೆಯ ವೈವಿಧ್ಯಮಯ ಗಿಡ–ಮರ–ಬಳ್ಳಿ, ಫಲ–ಪುಷ್ಪಗಳನ್ನು ತಾಲೂಕಿನುದ್ದಗಲಕ್ಕೂ ಕಾಣಬಹುದಾಗಿದೆ.

**ಪ್ರಾಣಿಸಂಪತ್ತು :** ತಾಲೂಕಿನಲ್ಲಿ ಕ್ವಚಿತ್ತಾಗಿ ಚಿರತೆ, ನರಿ, ಕರಡಿ, ತೋಳ, ಜಿಂಕೆ, ಕಾಡುಹಂದಿ, ನಾನಾಜಾತಿಯ ಹಾವು ಮುಂತಾದ ಪ್ರಾಣಿಗಳಿವೆ. ಬೆಕ್ಕು, ನಾಯಿ, ದನ, ಎಮ್ಮೆ, ಕುದುರೆ, ಕತ್ತೆ, ಮೊಲ, ಹಂದಿ, ಕೋಳಿ, ಕುರಿ, ಆಡು, ಮೇಕೆ, ಮುಂತಾದ ಸಾಕುಪ್ರಾಣಿಗಳು ಸಾಮಾನ್ಯವಾಗಿವೆ. ಕಾಗೆ, ಗುಬ್ಬಚ್ಚಿ, ಪಾರಿವಾಳ, ಮುಂತಾದ ಪಕ್ಷಿಗಳು, ನಾನಾ ಬಗೆಯ ಚಿಟ್ಟೆಗಳು, ದುಂಬಿಗಳು ಹಾಗೂ ನಾನಾ ಜಾತಿಯ ಮೀನುಗಳೂ ತಾಲೂಕಿನಲ್ಲಿವೆ.

**ಖನಿಜ ಸಂಪತ್ತು :** ಈ ತಾಲೂಕು, ಸೀಮಿತ ಖನಿಜಸಂಪನ್ಮೂಲವನ್ನು ಹೊಂದಿದೆ. ಮೈಸೂರು ತಾಲೂಕಿನ ನೈರುತ್ಯ ಭಾಗದಲ್ಲಿ ಕ್ರೋಮೈಟ್ ದೊರೆಯುತ್ತದೆ. ಉತ್ತನಹಳ್ಳಿ, ಸೊಳ್ಳೇಪುರ, ಅಯ್ಯನಹಳ್ಳಿ ವಾಚನಹಳ್ಳಿ ಮತ್ತು ವಡ್ಡರಪಾಳ್ಯಗಳಲ್ಲೂ ಕ್ರೋಮೈಟ್ ನಿಕ್ಷೇಪವಿದೆ. ಮೈಸೂರು ನಗರಕ್ಕೆ ೧೮ ಕಿ.ಮೀ. ದೂರದಲ್ಲಿರುವ ಗೋಪಾಲಪುರ ಗ್ರಾಮದ ಪಶ್ಚಿಮಭಾಗ ಕಲ್ನಾರು ಹಾಗೂ ವರ್ಮಿಕುಲೈಟ್ ನಿಕ್ಷೇಪವಿದೆ. ತಾಲೂಕಿನ

ಚಟ್ಟನಹಳ್ಳಿ ಕಡಕೊಳ ತಾಳೂರುಗಳಲ್ಲಿ ಬಳಪದ ಕಲ್ಲು ಲಭಿಸುತ್ತದೆ. ತಾಲೂಕಿನ ಮೇಟಗಳ್ಳಿ ಹಾಗೂ ಸಾದನಹಳ್ಳಿಗಳಲ್ಲಿ ಅಲಂಕಾರಿಕ ಗ್ರ್ಯಾನೈಟ್ ಕಲ್ಲುಗಳು ಲಭಿಸುತ್ತವೆ.

**ವಾಯುಗುಣ:** ತಾಲೂಕಿನಲ್ಲಿ ಮಾನ್ಸೂನ್ ಮಾದರಿಯ ವಾಯುಗುಣವಿದೆ. ಇಲ್ಲಿನ ಕೃಷಿ ಚಟುವಟಿಕೆ ಹೆಚ್ಚಾಗಿ ಮಳೆಯನ್ನಾಧರಿಸಿದೆ. ತಾಲೂಕಿನಲ್ಲಿ ಪ್ರಮುಖವಾಗಿ ನಾಲ್ಕು ಋತುಮಾನಗಳನ್ನು ಕಾಣಬಹುದು. ೧. ಮಾರ್ಚ್‌ನಿಂದ ಮೇ ವರೆಗೆ ಬೇಸಿಗೆ ಕಾಲ, ೨. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನೈರುತ್ಯ ಮಾನ್ಸೂನ್ ಕಾಲ, ೩. ಅಕ್ಟೋಬರ್‌ನಿಂದ ನವೆಂಬರ್‌ವರೆಗೆ ಈಶಾನ್ಯ ಮಾನ್ಸೂನ್ ಕಾಲ, ೪. ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಚಳಿಗಾಲ ಕಂಡುಬರುತ್ತದೆ.

**ಮಳೆ:** ನೈರುತ್ಯ ಮಾನ್ಸೂನ್ ಅಂದರೆ ಜೂನ್–ಸೆಪ್ಟೆಂಬರ್ ಅವಧಿಯಲ್ಲಿ ಹೆಚ್ಚು ಮಳೆಯಾಗುತ್ತದೆ. ಇದನ್ನು ಮುಂಗಾರು ಮಳೆ ಎಂದೂ ಕರೆಯುವರು. ತಾಲೂಕಿನ ೧೯೪೧–೯೦ರ ಅವಧಿಯಲ್ಲಿ ಆಗಿದ್ದ ವಾಡಿಕೆ ಮಳೆ ೭೮೪ ಮಿ.ಮಿ. ಇದ್ದು,ಸರಾಸರಿ ೫೩ ದಿನ ವಾಡಿಕೆ ಮಳೆಯಾಗಿತ್ತು. ೨೦೦೮ರಲ್ಲಿ ೭೧೦ ಮಿ.ಮೀ. ವಾಸ್ತವಿಕ ಮಳೆಯಾಗಿದ್ದು, ೫೯ ದಿನ ಮಳೆಯಾಗಿತ್ತು. ತಾಲೂಕಿನಲ್ಲಿರುವ ಆರು ವೃಷ್ಟಿಮಾಪಕ ಕೇಂದ್ರಗಳೂ ಸುಸ್ಥಿತಿಯಲ್ಲಿವೆ. ಆಯ್ದ ಐದು ವರ್ಷಗಳಲ್ಲಿ ತಾಲೂಕಿನಲ್ಲಿ ಆದ ಮಳೆಯ ಪ್ರಮಾಣ ಇಂತಿದೆ: ೨೦೦೦ದಲ್ಲಿ ಬಿದ್ದ ಮಳೆಯ ಪ್ರಮಾಣ ೯೮೦ ಮಿ.ಮಿ, ಮಳೆ ಬಿದ್ದ ದಿನಗಳು ೫೭. ೨೦೦೧ರಲ್ಲಿ ಬಿದ್ದ ಮಳೆ ೭೩೨ ಮಿ.ಮೀ, ಮಳೆ ಬಿದ್ದ ದಿನಗಳು ೪೭, ೨೦೦೨ರಲ್ಲಿ ಬಿದ್ದ ಮಳೆ ೫೨೦ ಮಿ.ಮೀ., ಮಳೆ ಬಿದ್ದ ದಿನಗಳು ೩೩, ೨೦೦೩ರಲ್ಲಿ ಬಿದ್ದ ಮಳೆ ೭೬೦ ಮಿ.ಮೀ., ಮಳೆ ಬಿದ್ದ ದಿನಗಳು ೪೬, ೨೦೦೪ರಲ್ಲಿ ಬಿದ್ದ ಮಳೆ ೭೪೯ ಮಿ.ಮೀ., ಮಳೆ ಬಿದ್ದ ದಿನಗಳು ೫೩.

**ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯ:** ಮೈಸೂರು ನಗರದಲ್ಲಿರುವ ಈ ಪ್ರಾಣಿಸಂಗ್ರಹಾಲಯವನ್ನು ೧೮೯೨ರಲ್ಲಿ ಸ್ಥಾಪಿಸಲಾಗಿದ್ದು, ೧೯೨೦ರಲ್ಲಿ ಇದನ್ನು ಸಾರ್ವಜನಿಕರ ವೀಕ್ಷಣೆಗಾಗಿ ಅನುವುಗೊಳಿಸಲಾಯಿತು. ೧೯೭೨ರಲ್ಲಿ ಇದನ್ನು ಅರಣ್ಯ ಇಲಾಖೆಯ ನಿಯಂತ್ರಣಕ್ಕೆ ಒಳಪಡಿಸಲಾಗಿದೆ. ಸುಮಾರು ೨೫೦ ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಈ ಮೃಗಾಲಯ, ದಕ್ಷಿಣ ಭಾರತವೂ ಸೇರಿದಂತೆ ಪ್ರಪಂಚದ ಪ್ರಾಚೀನ ಮೃಗಾಲಯಗಳಲ್ಲಿ ಒಂದಾಗಿದ್ದು, ಆಫ್ರಿಕಾ, ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಿಂದ ಆಮದು ಮಾಡಿಕೊಂಡಿರುವ ಗೊರಿಲ್ಲಾ, ಬಿಳಿಹುಲಿ ಹಾಗೂ ಅಪರೂಪದ ಪ್ರಾಣಿ ಪಕ್ಷಿಗಳೂ ಸೇರಿದಂತೆ ೧೫೦೦ಕ್ಕೂ ಹೆಚ್ಚು ವೈವಿಧ್ಯಮಯ ಪ್ರಾಣಿ–ಪಕ್ಷಿ ಸಂಕುಲದ ಸಂಗ್ರಹಾಲಯವಾಗಿದೆ. ಮೃಗಾಲಯದಲ್ಲಿರುವ ಪುಟ್ಟ ಸಂಗ್ರಹಾಲಯದಲ್ಲಿ ಸತ್ತ ಪ್ರಾಣಿಗಳ ಕಳೇಬರವನ್ನು ವೈಜ್ಞಾನಿಕ ರೀತಿಯಲ್ಲಿ (ಚರ್ಮ ಪ್ರಸಾಧನ) ಸಂರಕ್ಷಿಸಿಡಲಾಗಿದೆ. ಮೃಗಾಲಯದ ಹಿಂಬದಿಯಲ್ಲಿರುವ ಕಾರಂಜಿಕೆರೆ ವನ್ಯಜೀವಿಧಾಮ, ನಗರದ ಇನ್ನೊಂದು ಆಕರ್ಷಣೆಯಾಗಿದ್ದು, ೯೦ ಎಕರೆ ವಿಶಾಲವಿರುವ ಈ ಕೆರೆಯಿಂದು ೭೦ಕ್ಕೂ ಹೆಚ್ಚು

ಬಗೆಯ ಪಕ್ಷಿಗಳಿಗೆ ಆಶ್ರಯತಾಣವಾಗಿದ್ದು, ಚಿಟ್ಟೆ ಉದ್ಯಾನ, ದೋಣಿವಿಹಾರಗಳಿಗೂ ಅವಕಾಶವಿದೆ.

**ಪರಿಸರ ಮಾಲಿನ್ಯ :** ಕೈಗಾರಿಕಾ ದೃಷ್ಟಿಯಿಂದ ಮೈಸೂರು ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಲಾಗಿದ್ದರೂ, ಮೈಸೂರು ತಾಲೂಕನ್ನು ೨೦೦೯–೧೪ರ ನೂತನ ಕೈಗಾರಿಕಾ ನೀತಿಯನ್ವಯ (ಮೈಸೂರು ಮಹಾನಗರಪಾಲಿಕೆ ಪರಿಮಿತಿಯನ್ನು ಹೊರತುಪಡಿಸಿ) ತಾಲೂಕನ್ನು ಹಿಂದುಳಿದ ತಾಲೂಕೆಂದು (ವಲಯ–III) ಎಂದು ಘೋಷಿಸಲಾಗಿದ್ದು, ಮೈಸೂರು ಮಹಾನಗರಪಾಲಿಕೆ ಪರಿಮಿತಿಯನ್ನು ಮುಂದುವರಿದ ಪ್ರದೇಶ (ವಲಯ–IV) ಎಂದು ಪರಿಗಣಿಸಲಾಗಿದೆ. ಆ ಕಾರಣ ಕೈಗಾರಿಕೆಗಳಿಂದ ಉಂಟಾಗುವ ಪರಿಸರಮಾಲಿನ್ಯ ಹಾಗೂ ಕೊಳಚೆ ನೀರಿನ ಸಮಸ್ಯೆಗಳಿಂದ ಪರಿಸರವನ್ನು ರಕ್ಷಿಸಲು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಸೂಕ್ತ ಕ್ರಮಕೈಗೊಂಡಿದೆ. ತತ್ಪರಿಣಾಮವಾಗಿ ತಾಲೂಕಿನ ಕಾರ್ಖಾನೆಗಳು ಜಲಮಾಲಿನ್ಯ ಪರಿಸರ ಮಾಲಿನ್ಯ ಹಾಗೂ ವಾಯುಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಿವೆಯಾದರೂ ಸುಧಾರಣೆಗೆ ಅವಕಾಶವಿದೆ.